**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಸಲೀಂ ಅಹ್ಮದ್ ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಇಲಾಖಾ ಸಚಿವರ ಹೇಳಿಕೆ:**

ವಿಷಯ: ಗದಗ-ಶಿರಹಟ್ಟಿ-ಯಲವಿಗೆ ರೈಲ್ವೆ ಮಾರ್ಗಕ್ಕಾಗಿ ಕೇಂದ್ರವು ಒಪ್ಪಿಗೆಯನ್ನು ನೀಡಿ, 2017ರ ಕೇಂದ್ರ ರೈಲ್ವೆ ಬಜೆಟ್‌ನಲ್ಲಿ 650.00 ಕೋಟಿ ರೂ.ಗಳನ್ನು ಮೀಸಲಿಟ್ಟು, ರೈಲ್ವೆ ಕಾಮಗಾರಿಗಾಗಿ ಕೇಂದ್ರವು ಹಸಿರು ನಿಶಾನೆಯನ್ನು ನೀಡಿದೆ. ಈ ಯೋಜನೆಗಾಗಿ ಹೊಸ ಮಾರ್ಗ ಸರ್ವೆ ಕಾರ್ಯಗಳು ಮುಕ್ತಾಯವಾಗಿದೆ. ಆದರೆ, ರಾಜ್ಯ ಸರ್ಕಾರವು ಈ ಯೋಜನೆಗೆ 4 ವರ್ಷಗಳು ಕಳೆದರೂ ಸಹ ಹೆಚ್ಚಿನ ಆಸಕ್ತಿ ವಹಿಸದೇ, ಕೆಲಸ ಆರಂಭಿಸಲು ರಾಜ್ಯ ಸರ್ಕಾರದ ಅರ್ಧ ಪಾಲಿನ ವಂತಿಗೆಯ ಬಗ್ಗೆ ರೈಲ್ವೆ ಬೋರ್ಡ್‌ಗೆ ಸಹಮತಿಯನ್ನು ಮತ್ತು ಹಣವನ್ನು ನೀಡದೇ ಇರುವುದರಿಂದ ಕೇಂದ್ರ ರೈಲ್ವೆ ಬಜೆಟ್ ನಲ್ಲಿ 650.00 ಕೋಟಿ ರೂ.ಗಳನ್ನು ಮೀಸಲಿಟ್ಟಿರುವ ಅನುದಾನವು ರದ್ದಾಗುವ ಸಂಭವಗಳಿರುವ ವಿಷಯವು ಸಾರ್ವಜನಿಕವಾಗಿ ಮಹತ್ವದ ವಿಚಾರವಾಗಿರುವುದರಿಂದ ದಿನಾಂಕ:05.03.2022 ರಂದು ಸದರನದಲ್ಲಿ ನಿಯಮ 72 ಮೇರೆಗೆ ಪ್ರಸ್ತಾಪಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.

ಉತ್ತರ: ಗದಗ-ಯಲವಿಗಿ ನೂತನ ರೈಲು ಮಾರ್ಗವು ರೈಲ್ವೆ ಇಲಾಖೆಯ ಸ್ವಂತ ವೆಚ್ಚದಲ್ಲಿ ನಿರ್ಮಿಸಲು 2017-18ರ ಕೇಂದ್ರ ಮುಂಗಡ ಪತ್ರದಲ್ಲಿ ಮಂಜೂರು ಆಗಿರುವ ಯೋಜನೆಯಾಗಿದೆ. ಇದರ ಭೂಸ್ವಾಧೀನ ವೆಚ್ಚ ಹಾಗೂ ಕಾಮಗಾರಿಯ ವೆಚ್ಚದ ಸಂಪೂರ್ಣ ಅನುದಾನವನ್ನು ರೈಲ್ವೆ ಇಲಾಖೆಯೇ ಭರಿಸುವ ಹೊಣೆಗಾರಿಕೆಯೊಂದಿಗೆ ರೈಲ್ವೆ ಇಲಾಖೆಯು ಯೋಜನೆಯನ್ನು ಮಂಜೂರು ಮಾಡಿರುತ್ತದೆ. ಆದರೆ ಈವರೆಗೆ ರೈಲ್ವೆ ಇಲಾಖೆಯು ಸ್ವಯಂ ಪ್ರೇರಿತವಾಗಿ ಯೋಜನೆಯನ್ನು ಕೈಗೆತ್ತಿಕೊಂಡಿರುವುದಿಲ್ಲ. ಈ ಭಾಗದ ಸರ್ವತೋಮುಖ ಪ್ರಗತಿಗೆ ಈ ಯೋಜನೆಯ ಅಗತ್ಯವನ್ನು ಮನಗೊಂಡು ರಾಜ್ಯ ಸರ್ಕಾರವು 2022-23 ರ ಆಯವ್ಯಯ ಭಾಷಣದಲ್ಲಿ ರಾಜ್ಯ ಸರ್ಕಾರದ ವತಿಯಿಂದ ಭೂಸ್ವಾಧೀನ ವೆಚ್ಚವನ್ನು ಭರಿಸಲು ಹಾಗೂ ಕಾಮಗಾರಿ ವೆಚ್ಚದ ಶೇ.50 ರಷ್ಟನ್ನು ಒದಗಿಸಲು ನಿರ್ಧರಿಸಿ, ರೈಲ್ವೆ ಇಲಾಖೆಯಿಂದ ಈ ಯೋಜನೆಯ ಕ್ಷಿಪ್ರ ಅನುಷ್ಠಾನಕ್ಕಾಗಿ ಕೋರಲು ನಿರ್ಧರಿಸಲಾಗಿದೆ.

ಸಂಖ್ಯೆ: ಮೂಅಇ 78 ರಾರಾಹೆ 2022/ಇ

(ವಿ.ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ
ಸಚಿವರು